ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಂತಹ ಉತ್ತರ ಕೇಳುವುದಕ್ಕೆ ನಾವು ತಯಾರಿಲ್ಲ, ಇದನ್ನು ಪ್ರತಿಭಟಿಸಿ ನಾನು ಹೊರಗಡೆ ಹೋಗುತ್ತೇನೆ.

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ ಯವರು ನೇತೃತ್ವದಲ್ಲಿ ಕಾಂಗ್ರೆಸ್ ಸದಸ್ಯರು ಸದನದಿಂದ ಸಭಾತ್ಯಾಗ ಮಾಡಿದರು.)

ಶ್ರೀ ಸಿದ್ಧರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ಅವರು ಹೋಗಲಿ, ಇಂತಹ ಪ್ರಚಾರಕ್ಕೋಸ್ಕರ ಹೋಗಬೇಕು ಎನ್ನುವುದಾದರೆ ಹೋಗಲಿ. ವಿರೋಧ ಪಕ್ಷದ ನಾಯಕರಿಂದ ನಾನು ಈ ರೀತಿ ನಿರೀಕ್ಷಿಸಿರಲಿಲ್ಲ. ಕುಳಿತುಕೊಳ್ಳಿ, ಏಕೆ ಹೋಗುತ್ತಿದ್ದೀರಿ ? ನಿಮ್ಮ ಸರ್ಕಾರವಿದ್ದಾಗ ಇಂತಹ ಆರೋಪಗಳಿಗೆ ಈ ರೀತಿ ಮೂರು ಸಾರಿ ಮಾಡಬೇಕಾಗಿತ್ತು, ಸಾವಿರ ಸಾರಿ ಮಾಡಬೇಕಾಗಿತ್ತು, ಎಲ್ಲರೂ ದಪ್ಪ ಚರ್ಮದ ತರಹ ಕುಳಿತಿದ್ದಿರಿ. ಈಗ ನೀವು ನಮಗೆ ಕೇಳುವುದಕ್ಕೆ ಬಂದಿದ್ದೀರಿ. ನೀವು ಬಿಟ್ಟುಹೋಗಿರತಕ್ಕ ಪಾಪದ ಕೊಳೆಯನ್ನು ನಾವು ತೆಗೆಯುತ್ತಿದ್ದೇವೆ, ನಾವು ಇವರ ಸಾಲ ತೀರಿಸುತ್ತಿದ್ದೇರೆ. ಹಾಲು ಕೊಡುತ್ತೇವೆಂದು ಮುಖದ ಮೇಲೆ ಹಾಲು ಚೆಲ್ಲಿ, ದುಡ್ಡು ಕೊಡುವುದಕ್ಕಾಗದೆ ಸುಮಾರು 55 ಲಕ್ಷರೂಪಾಯಿಗಳನ್ನು ತೀರಿಸದೆ ಬಿಟ್ಟು ಹೋಗಿದ್ದರು, ನಾವು ಈಗ ಅದನ್ನು ತೀರಿಸುತ್ತಿದ್ದೇವೆ. ಸಂಬಳ ಕೊಡುವುದಕ್ಕೆ ದುಡ್ಡಿಲ್ಲವೆಂದು ಸಾಲ ತೆಗೆದುಕೊಂಡು ಬಂದಿದ್ದ ಎಲ್ಲವನ್ನೂ ತೀರಿಸಿದ್ದೇವೆ. ಇವರು ನಮಗೆ ಬುದ್ಧಿ ಹೇಳಲು ಬರುತ್ತಿದ್ದಾರೆ, ಇವರು ನಮ್ಮಿಂದ ಪಾಠ ಹೇಳಿಸಿಕೊಳ್ಳಬೇಕು. ತಾವು ಪ್ರಚಾರಕ್ಕೋಸ್ಕರ ಮಾಡುತ್ತಿರುವ ಇಂತಹ ಯಾವುದೇ ಆರೋಪದಲ್ಲಿ ಹುರುಳಿಲ್ಲ. ಹಾಲಿಗೆ ಕೊಟ್ಟಿರುವುದು ಸಹ ಅವರೇ ಮಾಡಿರುವುದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ವಿಶೇಷ ಘಟಕ ಯೋಜನೆಯಡಿ ಮಲೆನಾಡು ಹೈದರಾಬಾದ್ ಅಭಿವೃದ್ಧಿ ಮಂಡಳಿ ಮತ್ತು ಬಯಲು ಸೀಮೆ ಅಭಿವೃದ್ಧಿಗಾಗಿ ಈ ವರ್ಷ ಅಂದರೆ 96-97ನೇ ಸಾಲಿಗಾಗಿ ಇಟ್ಟಿಂಥ ಹಣವನ್ನು ಈ ಸಲ ಕೊಡಬೇಕು. ಅಲ್ಲದೆ, ಮುಂದಿನ ಸಲದಿಂದ ನಮ್ಮ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆಯೇ ಅದಕ್ಕೆ ನಾವು ಒಪ್ಪಿಕೊಂಡಿದ್ದೇವಾದ್ದರಿಂದ 96-97ನೇ ಸಾಲಿಗೆ ವಿಶೇಷ ಘಟಕ ಯೋಜನೆಯ ಟ್ರೈಬಲ್ ಪ್ಲಾನನಲ್ಲಿ ಈ ಹಣವನ್ನು ಒದಗಿಸಿಕೊಡಬೇಕು.

ಶ್ರೀ ಸಿದ್ಧರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ಅದಕ್ಕೂ ಇದಕ್ಕೂ ಸಂಬಂಧವಿಲ್ಲ, ಅದು ಬೇರೆ ವಿಚಾರವಾದ್ದರಿಂದ ಅನಂತರ ಚರ್ಚೆ ಮಾಡೋಣ. ಆದುದರಿಂದ, ಇಲ್ಲಿ ತಂದಿರತಕ್ಕ ಪೂರಕ ಅಂದಾಜುಗಳಿಗೆ ನಾವು ಬಳಸಿರತಕ್ಕ ಸಾದಿಲ್ವಾರು ಹಣವನ್ನು ಸದುದ್ದೇಶಗಳಿಗೆ ಖರ್ಚು ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ : ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಸಮಗ್ರವಾದ ಚರ್ಚೆಗೆ ತಾವು ಅವಕಾಶ ಮಾಡಿಕೊಡುವುದಿಲ್ಲವೇ ? ಯಾರೋ ಒಬ್ಬರು ಇದರ ಬಗ್ಗೆ ಭಾಷಣ ಮಾಡಿದರೆ ಆಯಿತೆಂದು ಹೇಳುತೀರೋ ?

ಉಪಾಧ್ಯಕ್ಷರು : ತಾವು ಈಗಲೇ ಮಾತನಾಡಿ, ಏಕೆಂದರೆ ಸಮಯ ನಿಗದಿಯಾಗಿದೆ.